# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಉಚ್ಚ ನ್ಯಾಯಾಲಯದ ಮೊಕದ್ದಮೆ ಸಂಖ್ಯೆ 41934-42007/2017 ರ ಮೇಲಿನ ದಿ.18.12.2017 ರ ಮಧ್ಯಂತರ ಆದೇಶದ ಅನ್ವಯ ಮೋಜಿಣಿ ಆಪರೇಟರ್ ಗಳ ವೇತನ ಮುಂದುವರೆಸುವ ಕುರಿತು –

ಓದಲಾಗಿದೆ :

(1) ಆಯುಕ್ತರು, ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಇವರ ಪತ್ರ ಸಂಖ್ಯೆ :ಉಗ್ರಾಣ .ಸಕಾಲ. 36/2012-13 ದಿ.28.12.2012

(2) ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 188 ನಾಸೇಖಾ 2012 ದಿ.21.06.2013

(3) ಪತ್ರ ಸಂಖ್ಯೆ : DPAR 117 NASEKHA 2017 ದಿ.11.08.2017

(4) ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ117 ನಾಸೇಖಾ 2016 ದಿ.26.09.2017

(5) ಕರ್ನಾಟಕ ಉಚ್ಚ ನ್ಯಾಯಾಲಯದ ದಿ.18.12.2017 ರ ಮಧ್ಯಂತರ ಆದೇಶ

*****

**ಪ್ರಸ್ತಾವನೆ :**

ಮೇಲೆ ಓದಲಾದ (1) ರ ಪತ್ರದಲ್ಲಿ, ಆಯುಕ್ತರು, ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಇವರು ಮೋಜಿಣಿ ಆಪರೇಟರ್‌ಗಳ ವೇತನವನ್ನು ಸಕಾಲ ಮಿಷನ್ ಅಡಿ ಭರಿಸುವಂತೆ ಸಕಾಲ ಮಿಷನ್‌ಅನ್ನು ಕೋರಿದ್ದರು. ಅದರಂತೆ, ಮೇಲೆ ಓದಲಾದ (2) ರ ಸರ್ಕಾರದ ಆದೇಶದಲ್ಲಿ, ಕಂದಾಯ ಇಲಾಖೆಯು ನೇಮಿಸಿಕೊಳ್ಳುವ ಮೋಜಿಣಿ ಆಪರೇಟರ್‌ಗಳಿಗೆ ವೇತನ ನೀಡಲು ಸಕಾಲ ಮಿಷನ್ ಒಪ್ಪಿಕೊಂಡಿತ್ತು.

ಸದರಿ ಮೋಜಿಣಿ ಆಪರೇಟರ್‌ಗಳು ಭೂಮಾಪನ ಇಲಾಖೆಗೆ ಸಂಬಂಧಿಸಿದ ಕೆಲಸಗಳನ್ನು ನಿರ್ವಹಿಸುತ್ತಿರುವುದರಿಂದ ಅವರ ವೇತನವನ್ನು ಕಂದಾಯ ಇಲಾಖೆಯಿಂದ ಪಡೆಯುವುದು ಸೂಕ್ತ. ಮೇಲೆ ಓದಲಾದ ಉಲ್ಲೇಖ (3) ರ ಪತ್ರದಲ್ಲಿ, ಸಕಾಲ ಮಿಷನ್ ಅಡಿ ನೀಡುತ್ತಿರುವ ಮೋಜಿಣಿ ಆಪರೇಟರ್‌ಗಳ ವೇತನವನ್ನು ಏಕೆ ನಿಲ್ಲಿಸಬಾರದು ಎಂಬುದರ ಬಗ್ಗೆ ಕಂದಾಯ ಇಲಾಖೆಯ ಅಭಿಪ್ರಾಯವನ್ನು ಕೋರಲಾಯಿತು. ಆಯುಕ್ತರು, ಭೂಮಾಪನ ಇಲಾಖೆ ಇವರು ಪತ್ರ ಸಂಖ್ಯೆ: SSLR/PMU/MOJ/MIS/9/13-14 ದಿ:14.08.2017 ರ ಪತ್ರದಲ್ಲಿ ಇಲಾಖೆಯ ಮೋಜಿಣಿ ಕೆಲಸಕ್ಕಾಗಿ ತನ್ನದೇ ಇಲಾಖೆಯ ಸಿಬ್ಬಂದಿಯನ್ನು ಬಳಸಲು ಉದ್ದೇಶಿಸಿದೆ ಎಂದು ತಿಳಿಸಿರುತ್ತಾರೆ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಆಸುಇ, ಇ-ಆಡಳಿತ ಇವರ ಅಧ್ಯಕ್ಷತೆಯಲ್ಲಿ ಹಾಗೂ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ, ಭೂಮಾಪನ ಇಲಾಖೆಯ ತೀರ್ಮಾನವನ್ನು ತಿಳಿಸಲಾಯಿತು. ಮೇಲೆ ಓದಲಾದ (4) ರ ಸರ್ಕಾರದ ಆದೇಶದಲ್ಲಿ, ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮೋಜಿಣಿ ಆಪರೇಟರ್‌ಗಳ ವೇತನವನ್ನು ದಿ.01.10.2017 ರಿಂದ ಅನ್ವಯವಾಗುವಂತೆ ಸಕಾಲ ಮಿಷನ್ ವತಿಯಿಂದ ಭರಿಸಲಾಗುವುದಿಲ್ಲ ಎಂದು ತಿಳಿಸಲಾಯಿತು.

ಈ ನಡುವೆ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಿದ್ದ ಮೊಕದ್ದಮೆ ಸಂಖ್ಯೆ 41934-42007/2017 ರ ಮೇಲೆ, ನ್ಯಾಯಾಲಯವು ದಿ.18.12.2017 ರಂದು ನೀಡಿದ ಮಧ್ಯಂತರ ಆದೇಶದ ಅನ್ವಯ, ಸರ್ಕಾರವು ಮುಂದಿನ ವಿಚಾರಣೆಯ ದಿನಾಂಕದವರೆವಿಗೆ ಅರ್ಜಿದಾರರನ್ನು (ಮೋಜಿಣಿ ಆಪರೇಟರ್ ಗಳನ್ನು) ಕೆಲಸದಿಂದ ತೆಗೆಯಬಾರದು ಎಂದು ನಿರ್ದೇಶನ ನೀಡಿದೆ.

ಮೋಜಿಣಿ ಆಪರೇಟರ್‌ಗಳ ವೇತನವನ್ನು ಸಕಾಲ ಮಿಷನ್ ಅಡಿ ಭರಿಸುವುದನ್ನು ನಿಲ್ಲಿಸಿದ್ದರೂ ಸಹ, ಅವರುಗಳ ಸೇವೆಯನ್ನು ಮುಂದುವರೆಸುವುದೇ ಅಥವಾ ಬಾರದೇ ಎಂಬುದರ ಮೇಲೆ ಓದಲಾದ (4) ರ ಸರ್ಕಾರದ ಆದೇಶದ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ.

ಮಾನ್ಯ ಉಚ್ಚ ನ್ಯಾಯಾಲಯದ ದಿ.18.12.2017 ರಂದು ನೀಡಿದ ಮಧ್ಯಂತರ ಆದೇಶದ ಅನ್ವಯದಂತೆ, ಈ ವಿಷಯದಲ್ಲಿ ಹೆಚ್ಚಿನ ವಿವರಗಳನ್ನು ನೀಡಲು ಮತ್ತು ಜಿಲ್ಲಾಧಿಕಾರಿಗಳು ಮೋಜಿಣಿ ಆಪರೇಟರ್‌ಗಳಿಗೆ ವೇತನವನ್ನು ನೀಡುವುದನ್ನು ಮುಂದುವರೆಸಲು ಮೇಲೆ ಓದಲಾದ(4) ರ ಆದೇಶವನ್ನು ಹಿಂಪಡೆಯುವ ಅಗತ್ಯವಿದೆ. ಆದ್ದರಿಂದ ಈ ಕೆಳಗಿನ ಅದೇಶ :

**ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ180ನಾಸೇಖಾ2018,**

**ಬೆಂಗಳೂರು ,ದಿನಾಂಕ: 09-04-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ ,117 ನಾಸೇಖಾ 2016 ದಿನಾಂಕ 26.09.2017ರಲ್ಲಿ ಹೊರಡಿಸಿದ್ದ ಸರ್ಕಾರದ ಆದೇಶವನ್ನು ತತ್‌ಕ್ಷಣದಿಂದಲೇ ಹಿಂಪಡೆಯಲಾಗಿದೆ. ಸರ್ಕಾರವು ಮೋಜಿಣಿ ಆಪರೇಟರ್‌ಗಳ ವೇತನವನ್ನು ಯಾವ ಇಲಾಖೆಯು ನೀಡಬೇಕು ಎಂದು ತೀರ್ಮಾನ ಕೈಗೊಳ್ಳುವವರೆವಿಗೂ ಅಥವಾ ಮೊಕದ್ದಮೆ ಸಂಖ್ಯೆ :41934-42007/2017ರ ಮೇಲೆ ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ಮುಂದಿನ ನಿರ್ದೇಶನಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆವಿಗೆ, ಭೂ ಮಾಪನ ಇಲಾಖೆಯ ಮೋಜಿಣಿ ಆಪರೇಟರ್‌ಗಳ ವೇತನವನ್ನು ದಿ.01.102017 ರಿಂದ ಸಕಾಲ ಮಿಷನ್ ವತಿಯಿಂದ ಭರಿಸಲು ಮುಂದುವರೆಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಕೆ.ಮಥಾಯಿ.ಕೆ.ಎ.ಎಸ್)
"ಆಡಳಿತಾಧಿಕಾರಿ,
ಸಕಾಲ ಮಿಷನ್,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸಕಾಲ)"

9/4

ಗೆ,
ಸಂಕಲನಕಾರರು ,ಕರ್ನಾಟಕ ರಾಜ್ಯಪತ್ರ, ಮೈಸೂರು ರಸ್ತೆ,ಬೆಂಗಳೂರು-59-ಇವರಿಗೆ ಕಳುಹಿಸುತ್ತಾ ಆದೇಶವನ್ನು ಮುಂದಿನ ವಾರದ ರಾಜ್ಯಪತ್ರದಲ್ಲಿ ಪ್ರಕಟಿಸಿ 100 ಪ್ರತಿಗಳನ್ನು ಮೇಲೆಸಹಿ ಮಾಡಿದವರಿಗೆ ಪೂರೈಸಲು ಕೋರಿದೆ.

ಪ್ರತಿ:
1]ಪ್ರಧಾನ ಮಹಾಲೇಖಪಾಲರು(ಲೆಕ್ಕಪತ್ರ& ಹಕ್ಕುಗಳು)/(ಲೆಕ್ಕಪರಿಶೋಧನೆ),ಕರ್ನಾಟಕ,ಬೆಂಗಳೂರು
2]ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.ಕಂದಾಯ ಇಲಾಖೆ (ಜಿಲ್ಲಾಡಳಿತ),ಬಹುಮಹಡಿ ಕಟ್ಟಡ
3]ಆಯುಕ್ತರು, ಭೂಮಾಪನ,ಕಂದಾಯ ವ್ಯವಸ್ಥೆ ಹಾಗೂ ಭೂದಾಖಲೆಗಳ ಇಲಾಖೆ, ಕೆ.ಆರ್.ವೃತ್ತ,ಬೆಂಗಳೂರು-01
4]ನಿರ್ದೇಶಕರು, ಖಜಾನೆ ಇಲಾಖೆ,ಪೋಡಿಯಂ ಬ್ಲಾಕ್, ಬೆಂಗಳೂರು-01
5]ಜಂಟಿ ನಿರ್ದೇಶಕರು ,ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು-01

6]ಉಪ ನಿರ್ದೇಶಕರು,ಟಿ.ಎನ್.ಎಂ.ಸಿ.ಖನಿಜ ಭವನ,ಬೆಂಗಳೂರು
7]ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
8] ಎಲ್ಲಾ ಜಿಲ್ಲೆಗಳ ಖಜಾನಾಧಿಕಾರಿಗಳು
9] ಎಲ್ಲಾ ತಹಸೀಲ್ದಾರ್ಗಳು(ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಮೂಲಕ)
10]ಹೆಚ್ಚುವರಿ ಪ್ರತಿ /ಶಾಖಾ ರಕ್ಷಾ ಕಡತ/ ಓಡಿ.ಜಿ.ಸಿ

**ಮಾಹಿತಿಗಾಗಿ ಪ್ರತಿ:**

1]ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ,ಸಿಆಸುಇ(ಇ-ಆಡಳಿತ)ಹಾಗೂ ಮಿಷನ್ ನಿರ್ದೇಶಕರು,ಸಕಾಲ ಮಿಷನ್,ಇವರ ಆಪ್ತ ಕಾರ್ಯದರ್ಶಿ,ಬಹುಮಹಡಿ ಕಟ್ಟಡ
2] ಅಪರ ಮಿಷನ್ ನಿರ್ದೇಶಕರು,ಸಕಾಲ ಮಿಷನ್,ಇವರ ಆಪ್ತ ಸಹಾಯಕಿ